ಶ್ರೀ ಕೋಣಂದೂರು ಲಿಂಗಪ್ಪ.—ಅದರಲ್ಲಿ ವಾಸ್ತವಾಂಶ ಏನೂ ಗೊತ್ತಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜಲವಿದ್ಯುತ್ ಹಾಗೂ ನೀರಾವರಿ ಯೋಜನೆ ಈಗಾಗಲೇ ಆಗಿದೆ. ಈಗ ಮತ್ತೆ ಉತ್ತರ ಕರ್ನಾಟಕಕ್ಕೆ ನೀರು ಕೊಡುತ್ತೇವೆಂದು ಹೇಳುತ್ತಾರೆ. ಮ್ಯಾಪ್ ನೋಡಿದ್ದಾರೆಯೇ ?

1-30 A.M.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್.—ಈ ವರಾಹಿ ಯೋಜನೆಯಿಂದ ಹೊಸನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಿಗೂ ಮತ್ತು ಶಿವಮೊಗ್ಗ ತಾಲ್ಲೂಕುಗಳಿಗೂ ವ್ಯವಸಾಯಕ್ಕೆ ಏನಾದರೂ ಅನುಕೂಲವಾಗುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇದು ಮುಖ್ಯವಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡತಕ್ಕ ಯೋಜನೆಯಾದಾಗ್ಯೂ, ಇದರಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ೪೦ ಸಾವಿರ ಎಕರೆ ನೀರಾವರಿ ಆಗುತ್ತದೆಂದೂ ಆಗಲೇ ತಿಳಿಸಿದ್ದೇನೆ.

INTRODUCTION OF COLLECTION BONUS SCHEME AND OTHER SCHEMES BY K.S.R.T.C.

508 Sri B. Satyanarayana Singh (Hospet)

Will the Minister for Transport and Housing be pleased to state:-

(*a*) whether there is any proposal before the K.S.R.T.C. to introduce "Collection Bonus Scheme" as introduced by "Pallavan Transport Corporation" in Madras City which has resulted in an increased collection of one lakh of rupees per day ;

(*b*) whether there is any proposal before the K.S.R.T.C. to introduce "Maintenance Bonus Scheme, Tyre performance Bonus Scheme, and Punctuality Bonus Scheme";

(*c*) whether the Government would consider to introduce the system of window bookiug in all important traffic junctions in order to put down leakage of revenue;

(*d*) whether Government would constitute minitransport corporation as in Tamilnadu;

(*e*) whether the Government would consider to introduce standing bus scheme during peak hours in the city to relieve the traffic congestion;

(*f*) whether the Government would consider introduce "mini-buses" on shorter routes in cities ?

Sri K. H. Ranganath Minister for Transport and Housing.—

(*a*) No.

(*b*) No.

(*c*) Window Booking System has already been introduced at important bus stations like Mysore, Bangalore, Hassan and Gulbarga. This system is being extended to other places also.

(*d*) No.

(*e*) Standing buses are already in operation in Bangalore City. Introducti n of some more buses is under consideration of the K.S.R.T.C.

(*f*) No.

†ಶ್ರೀ ಬಿ. ಸತ್ಯನಾರಾಯಣ ಸಿಂಗ್ —ಇಲ್ಲಿ ಹೇಳಿರುವ ವಿಷಯವನ್ನು ಪ್ರಾಯೋಗಿಕವಾಗಿ ಮಾಡಿ ನೋಡುವುದಕ್ಕೇನು ತೊಂದರೆ ಇದೆ ?

†ಶ್ರೀ ಕೆ. ಎಚ್. ರಂಗನಾಥ್ —ತೊಂದರೆಯೇನಿದೆ ಎಂಬುದನ್ನು ತಿಳಿಸುವುದಕ್ಕೆ ಇಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪಮಾಡಬೇಕಾಗಿ ಬರುತ್ತದೆ. ಕಲೆಕ್ಷನ್ ಬೋನಸ್ ಸ್ಕೀಂ ತಮಿಳುನಾಡಿನಲ್ಲಿ ಜಾರಿಯಲ್ಲಿದೆ. ಆದರೆ ನಮ್ಮಲ್ಲಿ ಯಾರು ಎಲ್ಲಿ ಈ ಡಿಪೋಗಳನ್ನು ಚೆನ್ನಾಗಿ ಇಟ್ಟುಕೊಂಡಿರುತ್ತಾರೋ ಅಂಥವರಿಗೆ ಒಂದು ಬೋನಸ್ ಕೊಡತಕ್ಕ ಒಂದು ಪದ್ಧ ಜಾರಿಯಲ್ಲಿದೆ. ಇಲ್ಲಿ ಈ ಕಲೆಕ್ಷನ್ ಬೋನಸ್ ಸ್ಕೀಮನ್ನು ಜಾರಿಗೆ ಕೊಡುವುದಕ್ಕಾಗುವುದಿಲ್ಲ ಎಂಬುದಾಗಿ ತಿಳಿದು ಬಂದಿದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ನಾನು ಇಲ್ಲಿ (೩) ಪ್ರಶ್ನೆಯಲ್ಲಿ ಕೇಳಿರತಕ್ಕ ಮಿನಿಟ್ರಾನ್ ಸ್ಪೋರ್ಟ್ ಕಾರ್ಪೊರೇಷನ್ ತಮಿಳುನಾಡಿನಲ್ಲಿ ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಿರುವುದರಿಂದ ಅದನ್ನು ಇಲ್ಲಯೂ ಜಾರಿಗೆ ತರುವುದಕ್ಕೇನು ತೊಂದರೆ ಇದೆ ?

ಶ್ರೀ ಕೆ. ಎಚ್. ರಂಗನಾಥ್ —ತಮಿಳನಾಡಿನಲ್ಲಿ ಇರುವುದು ಮೋಟಾರ್ ವೆಹಿಕಲ್ಸ್ ಆಕ್ಟ್ ಕೆಳಗೆ ಬರುವುದಿಲ್ಲ. ಅಲ್ಲಿ ೧೯೭೪ರಲ್ಲಿ ತಮಿಳನಾಡು ಸರ್ಕಾರದವರು ಅಲ್ಲದ್ದ ಕೆಲವು ಖಾಸಗೀ ಬಸ್ಸುಗಳನ್ನು ಆಕ್ವಯಿರ್ ಮಾಡಿಕೊಂಡರು—ಆ ಸಂದರ್ಭದಲ್ಲಿ ಅವರದನ್ನು ಮಾಡಿದ್ದಾರೆ. ಇಲ್ಲಿ ಅದನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಬೆಳಗ್ಗೆ ಎಂಟೂ ಮುಕ್ಕಾಲು ಗಂಟೆಯಿಂದ ಹತ್ತೂವರೆ ವರೆಗೂ ಬಸ್ಸುಗಳು ಸರ್ಕಾರಿ ನೌಕರರಿಗೆ ಸರಿಯಾಗಿ ಸಿಕ್ಕದೆ ಇರುವುದರಿಂದ ಅವರಿಗೆ ಸಕಾಲದಲ್ಲಿ ಆಫೀಸಿಗೆ ಬರಲು ತುಂಬಾ ತೊಂದರೆಯಾಗಿದೆ. ಆದುದರಿಂದ ಈ ತೊಂದರೆಯನ್ನ ನಿವಾರಣೆ ಮಾಡಲು ತಾವೇನು ಕ್ರಮಗಳನ್ನು ಕೈಗೊಂಡಿದ್ದೀರಿ ?

ಶ್ರೀ ಕೆ. ಎಚ್. ರಂಗನಾಥ—ಅವರೆಗೆ ಮಾತ್ರವಲ್ಲ—ಎಲ್ಲ ಪ್ರಯಾಣೀಕರಿಗೂ ಸೌಲಭ್ಯಗಳನ್ನು ಹೆಚ್ಚಿಸಬೇ ಕಾಗಿದೆ. ಅದಕ್ಕಾಗಿ ಇರತಕ್ಕ ಬಸ್ಸುಗಳಲ್ಲೆ ಸೌಕರ್ಯವನೊದಗಿಸಲು ಆದಷ್ಟೂ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—(ಎಫ್) ಪ್ರಶ್ನೆಗೆ ಉತ್ತರವಾಗಿ—ಇಲ್ಲ ಎಂದಿದೆ. ಈಗ ಮಾರುಕಟ್ಟೆಯಲ್ಲಿ ಮಿನಿ ಬಸ್ಸುಗಳು ಅನ್ಬೈಲಬಲ್ಲಾಗಿರುವುದರಿಂದ ಇವುಗಳನ್ನು ಹಾಕಲು ಏನು ತೊಂದರೆ ಇದೆ ?

ಶ್ರೀ ಕೆ. ಎಚ್. ರಂಗನಾಥ್.—ಅದು ಅನ್ಎಕನಾಮಿಕಲ್. ಅದಕ್ಕೆ ಅದನ್ನು ಕೈಬಿಟ್ಟಿದೆ.

CONSTRUCTION OF CAUSE WAY NEAR SASALAHALLY

515 **Sri T. M. Manjunath (Tiptur)**—

Will the Minister for Public Works and Electricity be pleased to state.—

(*a*) whether any plan and estimates for the construction of Causeway near Sasalahally have been sent by the concerned Engineer to Government.—

(*b*) if so, when the Government would take up the work ?